**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಸಿಸಿ ನಂ 694/2012**

| | |
|---|---|
| ಸಿ.ಡಬ್ಲೂಃ 7 | ಪಿಡಬ್ಲೂ 7 |
| ಸಾಕ್ಷಿದಾರರ ಹೆಸರು | ಶಿವಮ್ಮ |
| ಗಂಡನ ಹೆಸರು | ನರಸಿಂಹಮೂರ್ತಿ |
| ವಯಸ್ಸು | 55 ವರ್ಷ |
| ಉದ್ಯೋಗ | ಕೂಲಿ |
| ವಾಸ ಸ್ಥಳ | ತ್ಯಾಮಗೊಂಡನಹಳ್ಳಿ |

**ದಿನಾಂಕಃ 2.9.2023. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ** ಮಾನ್ಯ ಸಹಾಯಕ ಅಭಿಯೋಜಕ **ರವರಿಂದ**

ಚಾಸಾ 1 ರಿಂದ 6 ಮತ್ತು 8 ರಿಂದ 11 ಗೊತ್ತು. ಆರೋಪಿ ಗೊತ್ತು.ಸುಮಾರು 15 ವರ್ಷಗಳ ಹಿಂದೆ ಚಾಸಾ 2 ರವರು ಆರೋಪಿ 1 ರವರ ಜೊತೆ ಚಾಸಾ 1 ರವರನ್ನು ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆ ಸಮಯದಲ್ಲಿ ಬ್ರಾಸ್ ಲೈಟು, ಉಂಗುರ, ಕೊರಳ ಚೈನು, ಅನ್ನು ಅರೋಪಿ 1 ರವರಿಗೆ ಕೊಟ್ಟಿರುತ್ತೇವೆ. ದೊಡ್ಡಬಳ್ಳಾಪುರ ಮಾಂಗಲ್ಯ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡಿಕೊಟ್ಟಿರುತ್ತೆವೆ. ಚಾಸಾ 1 ಮತ್ತು ಆರೋಪಿ 1 ರವರು ಚೆನ್ನಾಗಿ ಇದ್ದು ನಂತರ ಚಾಸಾ 1 ರವರಿಗೆ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಮತ್ತು ಆಸ್ತಿ ಬರೆಸಿಕೊಂಡು ಬಾ ಎಂದು ಹಿಂಸೆ ಕೊಡುತ್ತಿದ್ದರು. ಮಗು ಆದ ಮೇಲೆ ಆರೋಪಿ 1 ರವರ ಮನೆಯಲ್ಲಿ ಸ್ವಲ್ಪ ದಿನ ಇದ್ದು ಚಾಸಾ 1 ರವರ ತಂದೆ ತಾಯಿ ಬಂದರೆ ಮಗು ನೋಡಲು ಬಿಡುತ್ತಿರಲಿಲ್ಲ. ಚಾಸಾ 1 ರವರ ತಾಯಿಗೆ ಹುಷಾರಿಲ್ಲ ಎಂದು ಆಸ್ಪತ್ರೆಗೆ ದಾಖಲಿಸಿದ್ದು ಚಾಸಾ 1 ರವರ ಸಂಬಂಧಿಕರು ಬಂದು ಕರೆದುಕೊಂಡು ಹೋಗಿರುತ್ತಾರೆ. ಆರೋಪಿ 1 ರವರು ಚಾಸಾ 1 ರವರನ್ನು ಕರೆದುಕೊಂಡು ಹೋಗಲು ಬಂದಿರಲಿಲ್ಲ.

**ಸಾಕ್ಷಿಯು ಉಳಿದ ಅಂಶಗಳನ್ನು ಹೇಳದೇ ಇರುವುದರಿಂದ ಈ ಸಮಯದಲ್ಲಿ ಮಾನ್ಯ ಸ.ಅ.ಅ.ರವರು ಸಾಕ್ಷಿ ಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.**

ದಿನಾಂಕ 7.11.2008 ರಲ್ಲಿ ಆರೋಪಿ 1 ರವರ ಜೊತೆ ಚಾಸಾ 1 ರವರನ್ನು ಮದುವೆ ಮಾಡಿಕೊಟ್ಟಿದ್ದು ಮದುವೆಗೆ ನಾನು ಹೋಗಿದ್ದು ವರದಕ್ಷಿಣೆಗಾಗಿ 32 ಗ್ರಾಂ ಬ್ರಾಸ್ ಲೈಟು, 25 ಗ್ರಾಂ ಬಂಗಾರದ ಕೊರಳು ಚೈನು, 6 ಗ್ರಾಂ ಚಿನ್ನದ ಉಂಗುರ ಬಟ್ಟೆಗಳಿಗಾಗಿ 50 ಸಾವಿರ ನಗದು ಹಣವನ್ನು ಕೊಟ್ಟು ಎಲ್ಲಾ ಖರ್ಚುಗಳನ್ನು ಇಟ್ಟು ನಾವೇ ಮದುವೆ ಮಾಡಿಕೊಟ್ಟಿರುತ್ತೇವೆ. ಆರೋಪಿಗಳು ಚಾಸಾ 1 ರವರಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರೆಂದು ಚಾಸಾ 1 ರವರ ತಂದೆ ವಿಚಾರ ತಿಳಿಸಿದ್ದು, ಅವರ ಮನೆಗೆ ಬಂದು ತಿಳಿಸಿದಾಗ ಚಾಸಾ 1 ರವರ ತಂದೆ 5 ಲಕ್ಷ ರೂ ಗಳನ್ನು ಆರೋಪಿ 1 ರವರನ್ನು ಮನೆಗೆ ಕರೆಸಿ ಕೊಟ್ಟಿದ್ದರು ಎಂದು ತಿಳಿಯಿತು. ನಂತರ ಆರೋಪಿ 1 ರವರು ಚುನವಣೆಗೆ ನಿಂತು 15 ಲಕ್ಷ ಖರ್ಚುಮಾಡಿ ಸೋತಿದ್ದೇನೆ. ಮುಂದೆ ಚುನಾವಣೆಗೆ ನಿಂತಿದ್ದೇನೆ 25 ಲಕ್ಷ ಬೇಕು ಎಂದು ಹಾಗೂ ಪಿ ಡಿ ಓ ಪರೀಕ್ಷೆ ಬರೆದು ಕೆಲಸ ಸಿಗಲಿಲ್ಲ ಅದಕ್ಕಾಗಿ 20 ಲಕ್ಷ ಲಂಚ ಕೊಡಬೇಕೆಂದು ಎಲ್ಲಾ ಸೇರಿ 50 ಲಕ್ಷ ರೂ ಗಳನ್ನು ಚಾಸಾ 1 ರವರ ತಂದೆ ಮನೆಯಿಂದ ತೆಗೆದುಕೊಂಡು ಬರಬೇಕೆಂದು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಚಾಸಾ 1 ರವರು ಇಷ್ಟೊಂದು ಹಣ ಎಲ್ಲಿಂದ ತಂದು ಕೊಡುವುದು ಎಂದು ಕೇಳಿದಾಗ ನಿಮ್ಮ ತಂದೆಯವರು ಬೆಂಗಳೂರಿನಲ್ಲಿ ಕಟ್ಟಿರುವ ಮನೆಯನ್ನು ಮಾರಾಟ ಮಾಡಿಯಾದರು ಹಣ ತೆಗೆದುಕೊಂಡು ಬರಬೇಕೆಂದು ಬೈದು ಹಿಂಸೆ ನೀಡುತ್ತಿದ್ದು ಚಾಸಾ 1 ಅದಕ್ಕೆ ಒಪ್ಪದಿದ್ದಾಗ ಕೊರಳಿನಲ್ಲಿ ಇದ್ದ ಮಾಂಗಲ್ಯ ಸಮೇತವಾಗಿದ್ದ ಚಿನ್ನದ ಚೈನನ್ನು ಕಿತ್ತುಕೊಂಡು ಮನೆಯಿಂದ ಆಚೆ ಹಾಕಿರುತ್ತಾರೆಂದು ಚಾಸಾ 1 ರವರ ತಂದೆ ಮನೆಗೆ ಬಂದು ವಿಷಯ ತಿಳಿಸಿದಾಗ ಚಾಸಾ 1 ರವರ ತಂದೆ 5 ಲಕ್ಷ ರೂ ಗಳನ್ನು ಆರೋಪಿ 1 ರವರಿಗೆ ಕೊಟ್ಟಿರುತ್ತಾರೆಂದು ನನಗೆ ವಿಚಾರ ತಿಳಿಯಿತು. ಚಾಸಾ 1 ರವರ ತಂದೆ ತಾಯಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ಆರೋಪಿ 1 ರವರ ಹೆಸರಿಗೆ ಬರೆದುಕೊಂಡುವಂತೆ ಒತ್ತಾಯಿಸಿದರೆಂದು ಹಾಗೂ ಚಾಸಾ 1 ರವರು ಕೇಳುವುದಿಲ್ಲ ಎಂದು ಹೇಳಿದಾಗ ಕಾಲಿನಿಂದ ಒದ್ದು ಗಾಯಪಡಿಸಿದರು ಎಂದು ಆಸ್ತಿ ಹಣವನ್ನು ನನ್ನ ಹೆಸರಿಗೆ ಬರೆದುಕೊಡದಿದ್ದರೆ ಚಾಸಾ 1 ಮತ್ತು ಅವರ ಮನೆಯವರನ್ನು ಸಾಯಿಸುತ್ತೇನೆಂದು ಕೊಲೆ ಬೆದರಿಕೆ

ಹಾಕಿಕಳುಹಿಸಿದ್ದು ಈ ವಿಚಾರದಲ್ಲಿ ಚಾಸಾ 1 ರವರ ತಂದೆ ಚಾಸಾ 8 ರಿಂದ 10 ಇವರುಗಳು ಸೇರಿ ನ್ಯಾಯಾ ಪಂಚಾಯಿತಿ ಮಾಡಿದರೂ ಸಹ ಆರೋಪಿ 1 ರವರು ಶಾಪಿಂಗ್ ಹೋಗಣ ಎಂದು ಹೇಳಿ ವಕೀಲರ ಕಚೇರಿಗೆ ಕರೆದುಕೊಂಡು ಹೋಗಿ ವಿಚ್ಚೇದನ ಪತ್ರಕ್ಕೆ ಸಹಿ ಮಾಡು ಎಂದು ಬೆದರಿಕೆ ಹಾಕಿರುತ್ತಾರೆ ಎನ್ನುವ ವಿಚಾರ ಚಾಸಾ 1 ರವರ ತಂದೆಯವರಿಂದ ನನಗೆ ತಿಳಿಯಿತು ಎಂದರೆ ಸರಿ.

ಆರೋಪಿ ಪರ ವಕೀಲರು ಹಾಜರಿದ್ದು ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**

**ad absetn. EP filed . CW 1 present. And examined as pw 1. got marked eX.P1 to 3. prayer of APP to issue w/s to cw 2 to 5 is rejected. Cw 1 complainant as not stated anything about accused. Hence issuing w/s to cw 2 to 5 is not necessary . Hence they are dropped. 313 statement is dispensed at the**

**counsel for accused . For complaince u/s. 437A of cr.pc. For judgment.**

**26.7.2023**